ಶ್ರೀ ಧರ್ಮಸಿಂಗ್.—ಎಲ್ಲ ಕಡೆಗೂ ೩ ತಿಂಗಳಿಗೆ ಒಂದು ಸಲ ಕೊಡುತ್ತಿದ್ದೇವೆ.

ಶ್ರೀ ಮುಳ್ಳೂರು ಆನಂದರಾವ್.—ಕಾರ್ಪೊರೇಷನ್ ಮೀಟಿಂಗ್‌ನಲ್ಲಿ ಅಧಿಕಾರಿಗಳು ಇದನ್ನು ನಮ್ಮ ಗಮನಕ್ಕೆ ತಂದರು. ಸರ್ಕಾರದವರು ಮುಂಗಡವಾಗಿ ಕೊಟ್ಟರೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಅನುಕೂಲವಾಗುತ್ತದೆಂದು ನಮಗೆ ತಿಳಿಸಿದರು. ಆದ್ದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್. — ಈಗ ಆಕ್ಟ್ರಾಯ್ ರದ್ದಿನಿಂದ ಮುನಿಸಿಪಾಲಿಟಿಗಳಿಗೆ ಹಾಗೂ ಕಾರ್ಪೊರೇಷನ್‌ಗಳಿಗೆ ಏನು ತೊಂದರೆಯಾಗಿದೆ, ಅವನ್ನು ಬಗೆಹರಿಸುವ ಸಲುವಾಗಿ ಒಂದು ರಿಸೋರ್ಸಸ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ಅದರಲ್ಲಿ ಫೈನಾನ್ಸ್ ಸೆಕ್ರೆಟರಿ ಎಚ್.ಯು.ಡಿ. ಸೆಕ್ರೆಟರಿ ಹಾಗೂ ಪ್ಲಾನಿಂಗ್ ಸೆಕ್ರೆಟರಿ ಅವರು ಇದ್ದಾರೆ. ಅವರು ರಿಸೋರ್ಸಸ್‌ನ್ನು ಯಾವ ರೀತಿ ತುಂಬಿಕೊಡಬೇಕೆಂಬ ಬಗ್ಗೆ ಚರ್ಚೆ ಮಾಡಿ, ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಡುತ್ತಾರೆ.

ಶ್ರೀ ಎಂ. ಚಂದ್ರಶೇಖರ್.—ಈ ಸಿಬ್ಬಂದಿ ವರ್ಗವನ್ನು ಇನ್ನು ಒಂದು ವರ್ಷದಲ್ಲಿ ಬದಲಾವಣೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಅಲ್ಲಿ ಹೆಚ್ಚು ವರಿ ಸಿಬ್ಬಂದಿ ಇದ್ದರೂ ಸಹ ಹೊಸಬರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಧರ್ಮಸಿಂಗ್.—ಹೊಸಬರನ್ನು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಪಿ. ರಾಮದೇವ್.—ತಾವು ಈ ಬಗ್ಗೆ ಚೆಕ್ ಮಾಡಬೇಕು. ಸೆಕ್ಷನ್ ೮೨ (೧)ಕ್ಕೆ ವಿರುದ್ಧವಾಗಿ ಅಲ್ಲಿ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇದನ್ನು ತಾವು ಚೆಕ್ ಮಾಡಬೇಕು.

ಇನ್ನು ಕೋಟ್ಯಾಂತರ ರೂಪಾಯಿಗಳನ್ನು ಬಾಕಿ ವಸೂಲಿ ಮಾಡುವುದು ಇದೆ. ಟ್ರಾವೆಲ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಒಂದು ಕೋಟಿ ಬಾಕಿ ಇದೆ, ಕೇರಳಾ ಟ್ರಾನ್ಸ್‌ಪೋರ್ಟಿನಿಂದ ಹಲವಾರು ಲಕ್ಷ ರೂ ಗಳು ಬಾಕಿ ಇದೆ. ಪ್ರಕಾಶ್ ಟ್ರಾನ್ಸ್‌ಪೋರ್ಟಿನಿಂದ ೬೦ ಲಕ್ಷ ರೂ.ಗಳು ಬಾಕಿ ಇದೆ. ಈ ರೀತಿ ೫-೬ ಕೋಟಿ ರೂ.ಗಳು ಬಾಕಿ ವಸೂಲಿ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಅಲ್ಲಿ ಯಾವ ರೀತಿ ವ್ಯವಹಾರ ನಡೆಯುತ್ತಿದೆ ಎಂದರೆ, ಒಂದು ಕೋಟಿ ಬಾಕಿ ಇದ್ದರೆ, ಹತ್ತು ಲಕ್ಷ ಕೊಡಿ, ಬಿಟ್ಟುಬಿಡುತ್ತೇವೆ ಎಂದು ಹೇಳುತ್ತಿದ್ದಾರೆ. ಮೊದಲು ಈ ಬಗ್ಗೆ ಮೆಮೋ ಇಷ್ಟೂ ಮಾಡುತ್ತಾರೆ. ಅವರೇನಾದರು ಕೇಳಿದಷ್ಟು ಹಣ ಕೊಟ್ಟರೆ ಮೆಮೋ ತೆಗೆದುಹಾಕಿಬಿಡುತ್ತಾರೆ. ಅಲ್ಲಿಗೆ ವ್ಯವಹಾರ ಮುಗಿದು ಹೋಯಿತು. ಈ ರೀತಿಯಾದ ವ್ಯವಹಾರ ನಡೆಯುತ್ತಿದೆ. ಅಲ್ಲಿ ಹಿಂದೆ ಒಂದು ಸಾರಿ ಅವ್ಯವಹಾರ ನಡೆಯಿತು. ಡ್ಯೂಪ್ಲಿಕೇಟ್ ರಸೀತಿಯನ್ನು ಕೊಟ್ಟು ಕೋಟ್ಯಾಂತರ ರೂಪಾಯಿ ಗಳಷ್ಟು ಸುಲಿಗೆ ನಡೆಯಿತು. ಈ ರೀತಿ ಹಣ ಸುಲಿಗೆಯಾಗತಕ್ಕಂಥಾದ್ದನ್ನು ನಿಲ್ಲಿಸಬೇಕೆಂದು ನಾವು ಅನೇಕ ಸಾರಿ ಹೇಳಿದ್ದೇವೆ. ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಏನೊಂದು ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ ಅದನ್ನು ವಿಚಾರಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Graduates Registered as eligible for Stipends.

256 SRI M. C. BASAPPA (Chamarajnagar).—Will the Minister for Small Scale Industries, Labour and Wakf be pleased to state.—

(a) the total number of Graduates registered as eligible for stipend ;

(b) the number of them who are actually receiving the stipend ?

SRI C. M. IBRAHIM (Minister for Small Scale Industries, Labour & Wakf).—

(a) 37,654 as on 29-2-1980.

(b) 14,273 as on 29-2-1980.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ೩೭೬೪ ಜನ ಪದವೀಧರರು ಅಭ್ಯರ್ಥಿವೇತನದ ಅರ್ಹತೆಗಾಗಿ ನೋಂದಾಯಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇವರಲ್ಲಿ ೧೪,೨೭೩ ಜನ ಪದವೀಧರರು ಅಭ್ಯರ್ಥಿವೇತನವನ್ನು ಪಡೆಯುತ್ತಿದ್ದಾರೆ ಎಂದು ಹೇಳಿದ್ದಾರೆ. ಉಳಿದವರಿಗೆ ಏತಕ್ಕೋಸ್ಕರವಾಗಿ ಈ ಅಭ್ಯರ್ಥಿವೇತನವನ್ನು ಕೊಡುತ್ತಾ ಇಲ್ಲ ಎಂಬುದನ್ನು ಸರ್ಕಾರದವರು ತಿಳಿಸುತ್ತಾರೆಯೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಹೋದಸಾರಿ ಈ ಯೋಜನೆಗಾಗಿ ೨.೨೫ ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ಈ ಸಾರಿ ೩.೨೫ ಲಕ್ಷ ರೂಪಾಯಿಗಳನ್ನು ಈ ಯೋಜನೆ ಕೆಳಗೆ ಇಟ್ಟಿದ್ದಾರೆ. ಈಗಾಗಲೇ ೩೭೬೪ ಜನ ಪದವೀಧರರ ಪೈಕಿ ೧೪,೨೭೩ ಜನ ಪದವೀಧರರು ಅಭ್ಯರ್ಥಿವೇತನವನ್ನು ಪಡೆಯುತ್ತಿದ್ದಾರೆ, ಇನ್ನು ಉಳಿದಿರತಕ್ಕಂಥ ಸುಮಾರು ೨೩ ಸಾವಿರ ಪದವೀಧರರಿಗೆ ಅಭ್ಯರ್ಥಿ ವೇತನವನ್ನು ಕೊಡಬೇಕಾದರೆ ಸರ್ಕಾರಕ್ಕೆ ಆರ್ಥಿಕ ಒತ್ತಡ ಬರುತ್ತಿದೆ. ಇದರಿಂದಾಗಿ ಅವರಿಗೆ ವೇತನವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಯವರ ಜೊತೆಯಲ್ಲಿ ಈ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ ಈಗ ಎಲ್ಲರಿಗೂ ಅಭ್ಯರ್ಥಿ ವೇತನವನ್ನು ಕೊಡಬೇಕಾದರೆ ಈ ಬಗ್ಗೆ ಒಂದು ಸಪರೇಟ್ ಕಮಿಟಿ ಮಾಡಬೇಕಾಗುತ್ತದೆ. ಇದರಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರನ್ನು ಮತ್ತು ಶಾಸಕರನ್ನು ಸೇರಿಸಿ ಅವರು ಏನೊಂದು ವರದಿಯನ್ನು ಕೊಡುತ್ತಾರೋ ಅದನ್ನು ನಾವು ಪರಿಶೀಲನೆ ಮಾಡಿ ಮುಂದೆ ಒಂದು ಖಚಿತವಾದ ನಿಲುವನ್ನು ತೆಗೆದುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. ಈಗಿರತಕ್ಕಂಥ ಸ್ಕೀಮ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಅಲ್ಲ. ಕೇವಲ ಕೆಲಸ ಹುಡುಕುತ್ತಿರತಕ್ಕಂಥ ನಿರುದ್ಯೋಗಿ ಪದವೀಧರರುಗಳಿಗೆ, ಅವರ ಕುಟುಂಬವರ್ಗದವರ ವಾರ್ಷಿಕ ಆದಾಯ ೩,೬೦೦ ರೂಪಾಯಿಗಳಿಗಿಂತ ಕಡಿಮೆ ಇರತಕ್ಕಂಥವರಿಗೆ ಕೊಡಬೇಕು ಎಂದು ಇದೆ. ಅದೇ ರೀತಿಯಲ್ಲಿ ನಾವು ಇದುವರೆಗೆ ೧೪,೨೭೩ ಜನಕ್ಕೆ ಕೊಡುತ್ತಿದ್ದೇವೆ. ಎಲ್ಲರಿಗೂ ಕೊಡಬೇಕಾದರೆ ಈ ಬಗ್ಗೆ ಒಂದು ಸಮಿತಿಯನ್ನು ಮಾಡಿ ವಿಚಾರ ಮಾಡಬೇಕಾಗುತ್ತದೆ. ಈಗಾಗಲೇ ಸರ್ಕಾರ ಸಮಗ್ರವಾಗಿ ವಿಚಾರ ಮಾಡಬೇಕಾಗುತ್ತದೆ. ಈ ಬಗ್ಗೆ ಲೆಜಿಸ್ಲೇಚರ್ಸ್ ಲೆವೆಲ್‌ನಲ್ಲಿ ಒಂದು ಕಮಿಟಿ ಮಾಡಿ ಅವರು ಏನೊಂದು ತೀರ್ಮಾನವನ್ನು ಕೊಡುತ್ತಾರೆಯೋ ಅದರಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಒಟ್ಟು ೩೭೬೪ ಜನ ಪದವೀಧರರು ಏನಿದ್ದಾರೆ ಅವರು ೩,೬೦೦ ರೂಪಾಯಿಗಳಿಗಿಂತಲೂ ಕಡಿಮೆ ವರಮಾನ ಇರತಕ್ಕಂಥವರು ಎಂಬುದನ್ನು ನೀವು ಒಪ್ಪಿದ್ದೀರಿ. ಅಷ್ಟು ಜನರೂ ಸ್ಟೈಫಂಡನ್ನು ಪಡೆಯುವುದಕ್ಕೆ ಎಲಿಜಬಲ್ ಆಗಿದ್ದಾರೆ. ಹಣಕಾಸಿನ ತೊಂದರೆ ಸರ್ಕಾರಕ್ಕೆ ಇದ್ದಿದ್ದರೆ ಈ ಒಂದು ಯೋಜನೆಯನ್ನು ಜಾರಿಗೆ ತಂದಾಗ ಇಷ್ಟು ಸಾವಿರ ಜನಕ್ಕೆ ಎಂದು ಸೀಮಿತಗೊಳಿಸಬಹುದಾಗಿತ್ತು. ನನಗೆ ತಿಳಿದಮಟ್ಟಿಗೆ ಸರ್ಕಾರಕ್ಕೆ ಯಾವುದೇ ಹಣಕಾಸಿನ ಅಡಚಣೆ ಇಲ್ಲ, ಹೀಗಿಗಬೇಕಾದರೆ ಒಬ್ಬರಿಗೆ ಕೊಟ್ಟು, ಇನ್ನೊಬ್ಬರಿಗೆ ಕೊಡುವುದಕ್ಕೆ ಹಣ ಇಲ್ಲ ಎಂದು ಹೇಳತಕ್ಕಂಥಾದ್ದು ಸರಿಯೆಲ್ಲ. ಇದಕ್ಕಾಗಿ ಬಡ್ಜೆಟ್‌ನಲ್ಲಿ ಏತಕ್ಕೆ ಜಾಸ್ತಿ ಹಣವನ್ನು ಇಡಲಿಲ್ಲ ? ಬಡ್ಜೆಟ್‌ನಲ್ಲಿ ಜಾಸ್ತಿ ಹಣವನ್ನು ಇಡುವುದಕ್ಕೆ ಸಾಧ್ಯವಿಲ್ಲವಾದರೆ ಕನ್‌ಸಾಲಿಡೇಟೆಡ್ ಫಂಡ್‌ನಿಂದ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ ಅದನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ? ಈಗ ಉಳಿದಿರತಕ್ಕಂಥ ಪದವೀಧರರುಗಳಿಗೆ ಏತಕ್ಕೆ ಸ್ಟೈಫಂಡನ್ನು ಕೊಡಲಿಲ್ಲ ?

ಶ್ರೀ ಸಿ. ಎಂ. ಇಬ್ರಾಹಿಂ.—ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಕೊಡಬಾರದು ಎನ್ನತಕ್ಕಂಥ ಅಭಿಪ್ರಾಯ ಸರ್ಕಾರಕ್ಕೆ ಇಲ್ಲ. ಈ ಸ್ಕೀಮ್‌ಗಾಗಿ ಹೋದಸಲ ೨.೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆವು, ಈ ಸಲ ೩.೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅಂದರೆ ಬಜೆಟ್‌ನಲ್ಲಿ ಈ ಸಲ ಈ ಸ್ಕೀಮ್‌ಗೋಸ್ಕರವಾಗಿ ೧ ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದೇವೆ ಎಂದಾಯಿತು. ಈ ಒಂದು ಯೋಜನೆಯಿಂದ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಆರ್ಥಿಕ ಮಂತ್ರಿಯವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಇದಕ್ಕಾಗಿಯೇ ಒಂದು ಕನ್‌ಸಾಲಿಡೇಟೆಡ್ ಫಂಡ್ ಎಂದು ಮಾಡಿ ಅಥವಾ ಬೇರೆ ಏನಾದರೂ ಒಂದು ಪ್ಲಾನ್ ಮಾಡಿ ಈ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಈಗಾಗಲೇ ೩೭೬೪ ಸಾವಿರ ಜನರು ಪದವೀಧರರಾಗಿದ್ದಾರೆ. ಈ ವರ್ಷ ಇನ್ನೂ ೨೦ ಸಾವಿರ ಜನರು ಪದವೀಧರರಾಗುತ್ತಾರೆ. ಈ

ಒಂದು ಸಂಖ್ಯೆ ವರ್ಷೇವರ್ಷ ಚಿಕ್ಕಿಯುತ್ತಲೇ ಇರುತ್ತದೆ. ಇದು ಎಲ್ಲಿಗೆ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರೆಲ್ಲರಿಗೂ ಅಭ್ಯರ್ಥನಾ ವೇತನವನ್ನು ಕೊಡಬೇಕೆಂದರೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಇದೊಂದು ರಾಷ್ಟ್ರೀಯ ಸಮಸ್ಯೆಯಾಗಿರುವುದರಿಂದ ನಾವು ಇಲ್ಲಿ ಉಭಯತ್ರರೂ ಕುಳಿತು ಸಮಗ್ರವಾಗಿ ಪರಿಶೀಲನೆ ಮಾಡಿ ಒಂದು ಪರಿಹಾರವನ್ನು ಮಾಡಬೇಕಾಗಿದೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈ ಯೋಜನೆಯನ್ನು ರೂಪಾಂತರಗೊಳಿಸುವುದಕ್ಕೆ ನನ್ನ ಅಡ್ಡಿಯೇನೂ ಇಲ್ಲ. ಈ ಯೋಜನೆಯನ್ನು ಸರ್ಕಾರ ಯಾವರೀತಿ ಅಂಗೀಕಾರ ಮಾಡಿದೆಯೋ ಅದರಂತೆ ನೀವು ಆದನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ ; ಇದರಲ್ಲಿ ತಾರತಮ್ಯವನ್ನು ತೋರಿಸುತ್ತಿದ್ದೀರಿ. ಒಬ್ಬರಿಗೆ ಸೈಕಲ್ ಕೊಟ್ಟು ಇನ್ನೊಬ್ಬರಿಗೆ ಕೊಟ್ಟಿಲ್ಲ. ಈ ತಾರತಮ್ಯ ಏತಕ್ಕೆ ?

ಶ್ರೀ ಸಿ. ಎಂ. ಇಬ್ರಾಹಿಂ.—ಈಗ ಇದು ಆರ್ಥಿಕ ಸ್ಥಿತಿಯ ಮೇಲೆ ಬಹಳ ದುಷ್ಪರಿಣಾಮ ಬೀರಿರುವುದರಿಂದ ಎಲ್ಲರಿಗೂ ಸೈಕಲ್‌ನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಎಂ. ಸಿ ಬಸಪ್ಪ.—ಹಾಗಿದ್ದರೆ ಈ ಯೋಜನೆಯನ್ನು ಸ್ಕ್ರಾಪ್ ಮಾಡಿ.

ಶ್ರೀ ಸಿ. ಎಂ. ಇಬ್ರಾಹಿಂ.—ಈ ಯೋಜನೆಯನ್ನು ಸ್ಕ್ರಾಪ್ ಮಾಡಿಬಿಡಿ ಎಂದು ನೀವು ಹೇಳುವುದಾದರೆ ಹಾಗೆ ಮಾಡಬೇಕೇ ಬೇಡವೇ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ೧೯೭೮ರಲ್ಲಿ ಈ ಒಂದು ಯೋಜನೆ ಪ್ರಾರಂಭ ಆಯಿತು. ಈ ಯೋಜನೆಯನ್ನು ಹೀಗೆಯೇ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿ ಹೋದವರ್ಷ ಇದಕ್ಕಾಗಿ ೨ ಕೋಟಿ ೨೫ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಇಟ್ಟಿದ್ದರು ಮತ್ತು ಈ ವರ್ಷ ೩ ಕೋಟಿ ೨೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ನಮಗೆ ನೀವು ಸ್ವಲ್ಪ ಕಾಲಾವಕಾಶ ಕೊಡಿ ಈ ಸ್ಕೀಮ್‌ನಲ್ಲಿ ಯಾವರೀತಿ ಮಾರ್ಪಾಡು ಮಾಡಬೇಕೆಂಬುದರ ಬಗ್ಗೆ ನಾವು ವಿಚಾರ ಮಾಡುತ್ತೇವೆ, ಈ ಬಗ್ಗೆ ಒಂದು ಶಾಸಕರ ಸಮಿತಿಯನ್ನು ನಾವು ಮಾಡುತ್ತೇವೆ, ಅವರು ಇರತಕ್ಕಂಥ ಸಮಸ್ಯೆಗಳನ್ನೆಲ್ಲಾ ಚರ್ಚೆ ಮಾಡಿ ಏನೊಂದು ವರದಿಯನ್ನು ಕೊಡುತ್ತಾರೋ ಅದನ್ನು ಪರಿಶೀಲನೆ ಮಾಡಿ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಸಿ. ಬಸಪ್ಪ —ಸ್ವಾಮಿ, ಇದು ೧೯೭೮ ರಲ್ಲಿ ಜಾರಿಗೆ ಬಂದಂಥ ಯೋಜನೆ. ಇದನ್ನು ಜಾರಿಗೆ ತಂದಾಗ ಕೆಲವರಿಗೆ ಮಾತ್ರ ಸೈಕಲ್ ಕೊಟ್ಟು ಕೆಲವರಿಗೆ ಕೊಡುವಾರದು ಎನ್ನತಕ್ಕಂಥ ನಿಲುವು ಸರ್ಕಾರಕ್ಕೆ ಇತ್ತೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಆ ತರಹ ಏನೂ ಇಲ್ಲ.

ಶ್ರೀ ಎಂ. ಸಿ. ಬಸಪ್ಪ.—ಹಾಗಿದ್ದ ಮೇಲೆ ಈ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಈ ಒಂದು ಅನ್ಯಾಯವನ್ನು ತಾರತಮ್ಯವನ್ನು ಏತಕ್ಕೆ ಮಾಡುತ್ತಿದ್ದೀರಿ ?

ಶ್ರೀ ಸಿ. ಎಂ. ಇಬ್ರಾಹಿಂ.—ಇದು ಅನ್ಯಾಯವೂ ಅಲ್ಲ, ತಾರತಮ್ಯವೂ ಅಲ್ಲ. ಈ ಯೋಜನೆಗೆ ಎಷ್ಟು ದುಡ್ಡು ಕೊಡಬೇಕೆಂದು ಬಜೆಟ್‌ನಲ್ಲಿ ಪ್ರಾವಿಷನ್ ಇದೆಯೋ ಅಷ್ಟು ದುಡ್ಡನ್ನು ಸರ್ಕಾರದವರು ಕೊಡುತ್ತಾರೆ. ಉದಾಹರಣೆಗೆ ನಿನ್ನ ಜೇಬಿನಲ್ಲಿ ೧೦ ರೂ. ಇದ್ದರೆ ಮತ್ತು ಯಾರಾದರೂ ಅಷ್ಟನ್ನು ಕೇಳಿದರೆ ನೀವು ೧೦ ರೂಪಾಯಿಗಳನ್ನು ಮಾತ್ರ ಕೊಡಬೇಕಾಗುತ್ತದೆ. ಹಾಗೆ ಹಾಸಿಗೆ ಇರುವಷ್ಟಕ್ಕೆ ನಾವೂ ಕೂಡ ಕಾಲು ಚಾಚಬೇಕಾಗುತ್ತದೆ.

ಶ್ರೀ ಎಸ್. ಗೋವಿಂದ ಗೌಡ.—೩೬೦೦ ರೂಪಾಯಿಗಳಷ್ಟು ವಾರ್ಷಿಕ ಆದಾಯ ಇರತಕ್ಕಂಥವರಿಗೆ ಮಾತ್ರ ಈ ಯೋಜನೆ ಇದೆಯೆಂದು ತಾವು ಹೇಳಿದ್ದೀರಿ. ಆದರೆ, ೧೦-೧೫ ಸಾವಿರ ವರಮಾನ ಇರತಕ್ಕಂಥವರು ತಾಲ್ಲೂಕು ಆಫೀಸ್‌ನಲ್ಲಿ ೩,೫೦೦ ವಾರ್ಷಿಕ ಆದಾಯ ಇದೆಯೆಂದು ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಸೈಕಲ್ ಪಡೆಯುತ್ತಿದ್ದಾರೆ. ಅಂತಹವರಿಗೆ ಹೆಚ್ಚಿನ ಆದಾಯವಿದ್ದರೂ ಕಡಿಮೆ ಆದಾಯವಿದೆಯೆಂದು ಅಧಿಕಾರಿಗಳು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಹೀಗೆ ಕಡಿಮೆ ಆದಾಯದ ಸರ್ಟಿಫಿಕೆಟನ್ನು ಕೊಟ್ಟಂಥ ಅಧಿಕಾರಿಗಳ ಬಗ್ಗೆ ಮಾಹಿತಿಯನ್ನು ತಮ್ಮ ಗಮನಕ್ಕೆ ತಂದರೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಸಿ. ಎಂ. ಇಬ್ರಾಹಿಂ.—ಆ ತರಹ ಏನಾದರೂ ಇದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ಇಲ್ಲಿಯವರೆಗೆ ಈ ಇಡೀ ಸ್ಟೈಫಂಡರಿ ಸ್ಕೀಮ್ ಬಗ್ಗೆ ಮಾನ್ಯ ಬಸಪ್ಪನವರು ಕೇಳಿದಂಥ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಯವರು ಕೊಟ್ಟಂಥ ಉತ್ತರವನ್ನು ನಾನು ಕೇಳಿದ್ದೇನೆ. ಈ ಸ್ಕೀಂಗಾಗಿ ಅವರು ಎಷ್ಟೇ ಹಣವನ್ನು ಮಂಜೂರು ಮಾಡಿದರೂ ಕೂಡ ಇದರಲ್ಲಿ ಮೂಲಭೂತವಾಗಿ ದೋಷ ಇದೆಯೆಂದು ನನಗನ್ನಿಸುತ್ತಿದೆ. ಅದಕ್ಕೋಸ್ಕರ ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇಡೀ ಸ್ಕೀಂ ಬಗ್ಗೆ ಮತ್ತೆ ಸಮಗ್ರವಾಗಿ ಪುನರಾಲೋಚನೆ ಮಾಡಿ ಅರ್ಹರಾದ ಎಲ್ಲರಿಗೂ ಸ್ಟೈಫಂಡ್ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಈಗ ಈ ಯೋಜನೆಯಲ್ಲಿ ಇರತಕ್ಕಂಥ ಲೋಪದೋಷಗಳನ್ನು ಪರಿಶೀಲನೆ ಮಾಡಿ, ಯೋಜನೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಿ ಅವರಿಗೆಲ್ಲಾ ಆರ್ಥಿಕ ಸಹಾಯವನ್ನು ಕೊಟ್ಟು, ಅವರು ಅವರ ಕಾಲಮೇಲೆ ನಿಂತು ಕೊಳ್ಳುವುದಕ್ಕೆ ಅನುವು ಮಾಡಿಕೊಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ, —ಸ್ವಾಮಿ, ಮಾನ್ಯ ಆನಂದರಾವ್‌ರವರು ಪ್ರಾಕ್ಟಿಕಲ್ ಆಸ್ಪೆಕ್ಟ್‌ನ ಬಗ್ಗೆ ಏನು ಹೇಳುತ್ತಿದ್ದಾರೆ ಅದು ನಿಜ. ಆ ರೀತಿಯ ಸಮಸ್ಯೆಗಳು ಇವೆ, ನಾವೆಲ್ಲರೂ ಒಟ್ಟಾಗಿ ಕುಳಿತು ಯೋಚನೆ ಮಾಡಿ ಬಗೆಹರಿಸಬೇಕಾದ ಸಮಸ್ಯೆಗಳು ಅವು ಅವು ಕೇವಲ ಪಕ್ಷದ ಅಥವಾ ಸರ್ಕಾರದ ಸಮಸ್ಯೆಯಲ್ಲ. ಸಮಸ್ಯೆಗಳನ್ನು ಯಾವ ರೀತಿ ನಿವಾರಣೆ ಮಾಡಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಈ ಬಗ್ಗೆ ನಾವು ಒಂದು ಶಾಸಕರ ಸಮಿತಿಯನ್ನು ಮಾಡುತ್ತೇವೆ, ಅವರು ಈ ಸಮಸ್ಯೆಗೆ ಯಾವ ರೀತಿ ಪರಿಹಾರವನ್ನು ಕಂಡುಹಿಡಿಯಬೇಕು ಎಂಬುದನ್ನು ಯೋಚನೆ ಮಾಡುತ್ತಾರೆ. ನಮಗೆ ಸ್ವಲ್ಪ ಕಾಲಾವಕಾಶ ಕೊಡಿ. ಈ ಸ್ಕೀಮನ್ನು ೩೧-೩-೮೧ರ ವರೆಗೆ ಮುಂದುವರಿಸಿದ್ದೇವೆ. ಅಷ್ಟರೊಳಗೆ ಶಾಸಕರ ಸಮಿತಿಯನ್ನು ಮಾಡುತ್ತೇವೆ, ಅವರು ನಿಮ್ಮ ಸಲಹೆಗಳನ್ನು ತೆಗೆದುಕೊಂಡು ಯೋಚನೆ ಮಾಡಿ ಅಂತಿಮವಾಗಿ ನಮಗೆ ಅವರ ಅಭಿಪ್ರಾಯವನ್ನು ಕೊಡುತ್ತಾರೆ. ನಾವು ಅವರ ಸಲಹೆಗಳನ್ನು ತೆಗೆದುಕೊಂಡು ಅದನ್ನು ಕೂಲಂಕಷವಾಗಿ ಚರ್ಚೆ ಮಾಡಿ, ಅದರ ಮೇಲೆ ನಾವು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ —ನಮ್ಮ ಮಾನ್ಯ ಸದಸ್ಯರಾದಂಥ ಬಸಪ್ಪನವರು ಬೇಜಾರಿನಿಂದ ಈ ಯೋಜನೆಯನ್ನು ಸ್ಕ್ರಾಪ್ ಮಾಡಬೇಕು ಎಂದು ಹೇಳಿದರು, ಅದು ಉಚಿತವಲ್ಲ. ಪದವೀಧರರು ನಿರುದ್ಯೋಗಿಗಳಾಗಿ, ಅವರ ಸಮಸ್ಯೆ ಗಂಭೀರವಾಗಿರುವಂಥ ಒಂದು ಪರಿಸ್ಥಿತಿಯಲ್ಲಿ ಅವರು ಈ ರೀತಿ ಸಲಹೆ ಮಾಡುವುದು ಒಳ್ಳೆಯದಲ್ಲ. ಆದರ ಬದಲು ಸ್ಟೈಫಂಡ್ ಪಡೆಯಲು ಇರುವ ವಾರ್ಷಿಕ ಆದಾಯ ಮಿತಿಯನ್ನು ೩,೫೦೦ ರಿಂದ ೬,೦೦೦ ರೂಪಾಯಿಗಳಿಗೆ ಏರಿಸಬೇಕು. ಕರ್ನಾಟಕ ರಾಜ್ಯದಲ್ಲಿ ಹರಿಜನ-ಗಿರಿಜನ ಪದವೀಧರರಿಗೆ ಸ್ಟೈಫಂಡರಿ ಬೆನಿಫಿಟ್ಸ್ ಹೆಚ್ಚು ಸಿಕ್ಕುತ್ತಾ ಇಲ್ಲ. ಆದ್ದರಿಂದ ಹರಿಜನ-ಗಿರಿಜನ ಪದವೀಧರರಿಗೆ ಇನ್‌ಕಂ ಸರ್ಟಿಫಿಕೇಟ್ ಅನ್ವಯ ಮಾಡದೆ ಕಂಪಲ್ಸರಿಯಾಗಿ ಸ್ಟೈಫಂಡ್ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ತಿಳಿದಿರುವಂತೆ ಮಾನ್ಯ ಬಸಪ್ಪನವರದು ಈ ಯೋಜನೆಯನ್ನು ತೆಗೆದೇ ಹಾಕಬೇಕು ಎನ್ನುವ ಅಭಿಪ್ರಾಯವಲ್ಲ. ಒಬ್ಬರಿಗೆ ಸಿಕ್ಕುತ್ತಾ ಇದೆ, ಒಬ್ಬರಿಗೆ ಸಿಕ್ಕುತ್ತಾ ಇಲ್ಲ ಎನ್ನುವ ದೃಷ್ಟಿಯಿಂದ ಆ ರೀತಿ ಹೇಳಿದ್ದಾರೆ. ಚುನಾಯಿತ ಶಾಸಕರ ಹತ್ತಿರ ಬಂದು ನಮಗೆ ಸಿಕ್ಕುತ್ತಾ ಇಲ್ಲ, ನಮಗೆ ಕೊಡಿಸಿ ಎಂದು ಕೆಲವು ನಿರುದ್ಯೋಗಿ ಪದವೀಧರರು ಒತ್ತಡ ಹಾಕುವುದುಂಟು. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹೇಳಿದಾಗ, ಅವರು ಕೆಲವರಿಗೆ ಕೊಟ್ಟು ಬಿಟ್ಟಿದ್ದೇವೆ, ಫಂಡ್ಸ್ ಇಲ್ಲದೆ ಇರುವುದರಿಂದ ಬಾಕಿಯವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿರುತ್ತಾರೆ. ಆ ಹುಡುಗನಿಗೆ ಸಿಕ್ಕುತ್ತಾ ಇದೆ ಈ ಹುಡುಗನಿಗೆ ಏಕೆ ಸಿಕ್ಕುತ್ತಾ ಇಲ್ಲ ಎಂದು ಬೇಜಾರಾಗಿ, ಆ ಒಂದು ಕಾಂಟೇಕ್ಸ್‌ನಲ್ಲಿ ಇದನ್ನು ತೆಗೆದುಹಾಕಿ ಎಂದು ಹೇಳಿದರೇ ಹೊರತು ಈ ಸ್ಕೀಮನ್ನು ತೆಗೆದು ಹಾಕಬೇಕು ಎನ್ನುವುದು ಅವರ ಅಭಿಪ್ರಾಯವಲ್ಲ. ಹರಿಜನ-ಗಿರಿಜನರಿಗೆ ಕಂಪಲ್ಸರಿಯಾಗಿ ಸ್ಟೈಫಂಡರಿ ಕೊಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಪರಿಶೀಲನೆ ಮಾಡಿ ವಿಚಾರ ಮಾಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈ ಯೋಜನೆಯನ್ನು ರೂಪಾಂತರ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆ, ಎಲ್ಲರೂ ಕುಳಿತು ಆಲೋಚನೆ ಮಾಡಬೇಕು ಎಂದು ಅವರು ಹೇಳಿದರೆಂದು ಮಾನ್ಯ ಸಚಿವರು ಹೇಳಿದರು. ಆದಕ್ಕೆ ನಾನು ಅಡ್ಡಿ ಬರುತ್ತಾ ಇಲ್ಲ. ತಾವು ಈ ಯೋಜನೆ ಮಾಡತಕ್ಕ ಕಾಲದಲ್ಲಿ, ಎಷ್ಟು ಪದವೀಧರರು ಈ ಯೋಜನೆ ಕೆಳಗೆ ಬರಬಹುದು, ಎಷ್ಟು ಹಣ ಬೇಕಾಗ ಬಹುದು ಎಂದು ಯೋಚನೆ ಮಾಡವೆ ಜಾರಿಗೆ ತಂದಿರಾ ? ಹಾಗಿದ್ದರೆ ಅಷ್ಟು ಆಗತ್ಯವಾದ ಹಣವನ್ನು ಒದಗಿಸಿ ಯಾರ್ಯಾರು ಪದವೀಧರರು ಇದ್ದಾರೆ ಅವರೆಲ್ಲರಿಗೂ ಇದನ್ನು ಒದಗಿಸುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ. - ೧೯೭೮ ರಲ್ಲಿ ಈ ಸ್ಕೀಮನ್ನು ಹಾಕಿಕೊಂಡಾಗ ಈ ಬಗ್ಗೆ ಯೋಚನೆ ಮಾಡಬೇಕಾಗಿತ್ತು, ಆಗ ಆವರು ಯೋಚನೆ ಮಾಡಲಿಲ್ಲ. ಆದರೆ ಈಗ ನಾವು ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ತಾವು ಸಲಹೆ ಕೊಟ್ಟಿದ್ದೀರಿ. ಒಂದು ಸಮಿತಿ ಮೂಲಕ ತಮ್ಮೆಲ್ಲರ ಅಭಿಪ್ರಾಯವನ್ನು ಪಡೆದು ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಖಂಡಿತವಾಗಿಯೂ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ಆಶ್ವಾಸನೆ ಕೊಡುತ್ತೇನೆ.

Delay in handing over possession of land to S.C. and S.T. people in Jajur Village.

340· SRI T. CHOWDAIAH (Bharamasagar) and SRI V. MASIYAPPA (Chitradurga).—Will the Minister for Revenue and Agriculture be pleased to state —

(a) whether Government is aware that more than one hundred families of S.C. and S.T. people are facing hardships in Jajur Village, Challakere Taluk, Chitradurga District due to inordinate delay in handing ov r possession of land granted to them 20 years ago in Amrithmahal Kaval of this village ;

(b) whether Government intend to take immediate action in the matter to see that possession of land is given to them ;

(c) if not the reason for inordinate delay in the matter ?

SRI S. BANGARAPPA (Minister for Revenue and Agriculture).—

(a) Yes,

(b) Yes.

(c) Delay is partly due to the fact that these lands had to be jointly inspected by the Survey and Revenue Officers of Andhra Pradesh for verification of State boundaries and demarcation of forest boundary abutting this land. Besides, these lands have come under unauthorised occupation, calling for eviction.

ಶ್ರೀ ಟಿ. ಚೌಡಯ್ಯ.-ಮಾನ್ಯ ಅಧ್ಯಕ್ಷರೇ, ನಾನು ಉಪ ಪ್ರಶ್ನೆ ಕೇಳುವುದಕ್ಕೆ ಮುಂಚೆ ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಕೆಲವು ವಿವರಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ, ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲ್ಲೂಕಿನ, ಜಜೂರು ಗ್ರಾಮದಲ್ಲಿ ೧೯೦ ಜನರಿಗೆ ತಲಾ ೫ ಎಕರೆ ಜಮೀನು ಮಂಜೂರು ಮಾಡ ಲಾಗಿತ್ತು ಮಂಜೂರು ಮಾಡಿದ ತಕ್ಷಣ ಹಲವಾರು ಪ್ರಭಾವಯುತ ವ್ಯಕ್ತಿಗಳು ಪಕ್ಕದಲ್ಲಿರತಕ್ಕ ಫಾರೆಸ್ಟ್‌ಗೆ ಈ ಜಮೀನನ್ನು ಸೇರಿಸಬೇಕು. ಇವರಿಗೆ ದಕ್ಕಿಸಬಾರದು ಎಂದು ಸ್ಟೇ ಆರ್ಡರ್ ತಂದರು. ನಾಲ್ಕೈದು ವರ್ಷಗಳಾದ ಮೇಲೆ ಫಾರೆಸ್ಟ್ ಇಲಾಖೆಯವರು ಮತ್ತು ರೆವಿನ್ಯೂ ಇಲಾಖೆಯವರು ಜಾಯಿಂಟ್ ಇನ್ಸ್‌ಪೆಕ್ಷ್ ಮಾಡಿ ೧೯೬೦ರ ಸರಿ ಸುಮಾರಿನಲ್ಲಿ ಡಿಮಾರ್ಕೇಷನ್ ಮಾಡಿ ಮುಗಿಸಿದರು. ಆದಾದ ಮೇಲೆ